7.ಗಮನ ಸೆಳೆಯುವ ಸೂಚನೆ

ಉಚ್ಚಂಗಾವ್ ಕ್ಷೇತ್ರಕ್ಕೆ ಮಲೆನಾಡು ಅಭಿವೃದ್ಧಿ ಮಂಡಲಿಯಿಂದ ಹಣ ಬಿಡುಗಡೆ ಮಾಡದಿರುವುದರಿಂದ ಅಭಿವೃದ್ಧಿ ಕಾಮಗಾರಿ ಸ್ಥಗಿತ

ಶ್ರೀ ಮನೋಹರ್ ಪಿ.ಕಡೋಲ್ಕರ್ (ಉಚಗಾಂ): ಮಾನ್ಯ ಅಧ್ಯಕ್ಷರೆ, I call the attention of the Minister for Fisheries, Port Area Development, regarding the Stoppage of development work in Uchchagaon constitutency, due to non-release of funds by Malnad Area Development Board.

ಶ್ರೀ ರಮಾನಾಥ ರೈ (ಮೀನುಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಲ್ಲಿ ಉಚ್ಚಂಗಾವ್ ಮತ ಕ್ಷೇತ್ರಕ್ಕೆ ಈ ಕೆಳಕಂಡಂತೆ ಹಣ ವಿತರಿಸಲಾಗಿದೆ.

	ಅಂದಾಜು	ನಿಗದಿತ	ಖರ್ಚು
	(ಲಕ್ಷ ರೂ.ಗಳಲ್ಲಿ)		
1996-97	49.875	47.073	15.600
1997-98	71.640	54.230	20.210
1998-99	91.035	67.731	42.590
1999-2000	109.885	21.256	10.218
ಒಟ್ಟು	322.435	190.290	88.618

ಮಂಡಳಿಯಿಂದ ನೇರವಾಗಿ ಕ್ಷೇತ್ರ ಅಥವಾ ಉಪ-ವಿಭಾಗಗಳಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದ್ದು ಕಾಮಗಾರಿಗಳ ಪ್ರಗತಿ ಗಣನೆಯ ಆಧಾರದ ಮೇಲೆ ಬಿಲ್ ಪಾವತಿಗೆ ಉಪ ವಿಭಾಗಗಳಿಗೆ ಉಪ-ಹಂಚಿಕೆಯನ್ನು ಅನುಷ್ಠಾನ ಅಧಿಕಾರಿಗಳು ನಿರ್ವಹಿಸುತ್ತಾರೆ.

ಕಳೆದ ಮೂರು ವರ್ಷಗಳಲ್ಲಿ ಉಚ್ಚಗ್ಗಾಂವ ಕ್ಷೇತ್ರದಲ್ಲಿ ಮುಂದುವರೆದ ಹಾಗೂ ಹೊಸ ಕಾಮಗಾರಿಗಳನ್ನು ಸಮರ್ಪಕವಾಗಿ ಕೈಗೊಳ್ಳಲಾಗಿದ್ದು ಪ್ರಸಕ್ತ ಸಾಲಿನಲ್ಲಿ ಉಚ್ಚಗಾಂವ್ ಮತ ಕ್ಷೇತ್ರ ಸೇರಿದಂತೆ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಯಾವುದೇ ಮತ ಕ್ಷೇತ್ರಗಳಿಗೂ ಹೊಸ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ. ಮುಂದುವರೆದ

ಕಾಮಗಾರಿಗಳನ್ನು ಪೂರ್ಣಗೊಳಿಸಲು ಅದ್ಯತೆ ನೀಡಲಾಗಿದೆ.

ಅಧ್ಯಕ್ಷರು: ಮನೋಹರ್‌ರವರೇ ಕೇವಲ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಮನೋಹರ್ ಪಿ.ಕಡೋಲ್ಕರ: (ಹಿಂದಿಯಲ್ಲಿ ಮಾತನಾಡಿರುತ್ತಾರೆ)

ಅಧ್ಯಕ್ಷರು: ಮನೋಹರ್‌ರವರೇ, ತಾವು ಏನು ಹೇಳುತ್ತಿದ್ದೀರೋ ಅದು ಇಲ್ಲಿ ದಾಖಲಾಗುತ್ತಿಲ್ಲ. ನೀವೇನು ಮಾತನಾಡುತ್ತೀರೋ ಅದನ್ನು ಮೊದಲೇ ಬರೆದುಕೊಟ್ಟಿದ್ದರೆ ಅದನ್ನು ಕನ್ನಡಕ್ಕೆ ಭಾಷಾಂತರ ಮಾಡಿ ಅದಮೇಲೆ ಅದು ದಾಖಲೆಯಲ್ಲಿ ಹೋಗಲು ಅನುಕೂಲವಾಗುತ್ತಿತ್ತು. (ಶ್ರೀ ಮನೋಹರ್‌ರವರು ಮತ್ತೆ ಹಿಂದಿಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು: ನೀವು ಹಿಂದಿಯಲ್ಲಿ ಮಾತನಾಡಿದರೆ ಇಲ್ಲಿ ದಾಖಲಾಗುವುದಿಲ್ಲ. ಮರಾಠಿಯಲ್ಲಿ ಮಾತನಾಡಿದರು ದಾಖಲಾಗುವುದಿಲ್ಲ. ನೀವು ಮಾತನಾಡುವ ವಿಷಯದ ಸಾರಾಂಶವನ್ನಾದರೂ ಮೊದಲೇ ಬರೆದು ಕಳುಹಿಸಿದರೆ ಭಾಷಾಂತರ ಮಾಡಿ ದಾಖಲೆಗೆ ಬರೆದುಕೊಳ್ಳಲು ಅನುಕೂಲವಾಗುತ್ತಿತ್ತು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಕನ್ನಡದಲ್ಲಿ ಮಾತನಾಡುವುದಕ್ಕೆ ಅವರಿಗೆ ಗೊತ್ತು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಂಸದೀಯ ಸಚಿವರು): ಅವರಿಗೆ ಕನ್ನಡ ಗೊತ್ತು. ಆದರೂ ಮಾನ್ಯ ಸದಸ್ಯರು ಮರಾಠಿಯಲ್ಲಿ ಮಾತನಾಡಿದರೆ, ಅದನ್ನು ಬರೆದುಕೊಳ್ಳಲು ವ್ಯವಸ್ಥೆ ಇಲ್ಲ. ಆದುದರಿಂದ ಅವರು ಏನು ಮಾತನಾಡಿದರೂ ಮಂತ್ರಿಗಳಿಗ ಅರ್ಥವಾಗುವುದಿಲ್ಲವಾದ ಕಾರಣ ಉತ್ತರವನ್ನು ಏನು ಹೇಳಬೇಕು ಎಂಬುದೂ ಕೂಡ ಗೊತ್ತಾಗುವುದಿಲ್ಲ.

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮನೋಹರ್‌ರವರ ಪ್ರಶ್ನೆ ಇಡೀ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸಂಬಂಧಪಟ್ಟಂತೆ ಇದೆ. 1997-98 ಮತ್ತು 1998-99ರಲ್ಲಿ ಇದಕ್ಕೆ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆಯೋ ಅಷ್ಟು ಹಣವನ್ನು ಬಿಡುಗಡೆ ಮಾಡಿಲ್ಲವೆಂದೇ ಅವರು ಹೇಳುತ್ತಿದ್ದಾರೆ. ಮಲೆನಾಡು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಸಕರ ಪ್ರಶ್ನೆಯೂ ಕೂಡ ಇದೇ ಆಗಿದೆ. ಆದುದರಿಂದ ಈ ವಿಷಯ ಬಹಳ ಗಂಭೀರವಾಗಿದೆ. ಮಲೆನಾಡು ಅಭಿವೃದ್ಧಿ ಮಂಡಳಿಯ ಸಚಿವರೇನೋ ಬಹಳ ದಪ್ಪಗಿದ್ದಾರೆ, ಆದರೆ ಮಂಡಳಿ ಅಲ್ಲಿ ಸೊರಗಿಹೋಗಿದೆ, ಒಣಗಿಹೋಗಿದೆ. ಉಚ್ಚಗಾಂವ್ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮನೋಹರ್ ಕಡೋಲ್ಕರ್‌ರವರು ಏನು ಹೇಳಿದ್ದಾರೋ ಅದೇ ರೀತಿಯ ಸಮಸ್ಯೆ ಎಲ್ಲಾ ಕಡೆಯೂ ಇದೆ. ಆದುದರಿಂದ ಉಚ್ಚಗಾಂವ್ ಕ್ಷೇತ್ರಕ್ಕೆ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿಯ ಎಲ್ಲೆಗಳಿಗೆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆ

ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಲೆನಾಡು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ 71 ಸದಸ್ಯರುಗಳು ಬರುತ್ತಾರೆ. ಸದರಿ ವಿಷಯ ಬಹಳ ಗಂಭೀರವಾದುದರಿಂದ ಅರ್ಧ ಗಂಟೆ ಅವಧಿಯ ಚರ್ಚೆಗೆ ತಾವು ಈಗಲೇ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಏಕೆಂದರೆ ಕಳೆದ ವರ್ಷ ಕೆಲಸ ಮುಗಿದಿರುವುದರಲ್ಲಿ ಶೇಕಡ 25ಕ್ಕೆ ಮಾತ್ರ ಪೇಮೆಂಟ್ ಆಗಿದ್ದು ಇನ್ನು ಶೇಕಡ 75ರಷ್ಟು ಕೆಲಸ ಮುಗಿದಿರುವುದಕ್ಕೆ ಇನ್ನೂ ಪೇಮೆಂಟ್ ಆಗಿಲ್ಲ. ಈ ಪರಿಸ್ಥಿತಿ ಇರುವಾಗ ಹೊಸ ಯೋಜನೆಗಳು ಕೂಡ ಆಗುತ್ತಿಲ್ಲ. ಆದುದರಿಂದ ಇಂದು ಮಲೆನಾಡು ಅಭಿವೃದ್ಧಿ ಮಂಡಳಿ ಕೇವಲ ಹೆಸರಿಗೆ ಮಾತ್ರವಿದೆಯೇ ಹೊರತು ಇದರಿಂದ ಯಾವುದೇ ಕೆಲಸಗಳು ಸರಿಯಾಗಿ ಅನುಷ್ಠಾನ ಆಗುತ್ತಿಲ್ಲವೆಂದು ಎಲ್ಲ ಸದಸ್ಯರ ಮನಸ್ಸಿನಲ್ಲಿ ಆ ಭಾವನೆ ಮೂಡಿಸಿದೆ.

ಅಧ್ಯಕ್ಷರು: ಬಯಲು ಸೀಮೆ ಅಭಿವೃದ್ಧಿ ಮಂಡಳಿ ಪರಿಸ್ಥಿತಿಯೂ ಹೀಗೆಯೇ ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆಯ ಗಂಭೀರತೆಯ ಬಗ್ಗೆ ಎರಡು ಮಾತಿಲ್ಲ. ಆದರೆ ಕಾಲಿಂಗ್ ಅಟೆನ್‌ಶನ್‌ನಲ್ಲಿ ಯಾವ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೋ ಅದಕ್ಕೆ ತಕ್ಷಣದಲ್ಲಿ ಉತ್ತರವನ್ನು ಹೇಳಬಹುದು. ಆದರೆ ಬೇರೆ ಬೇರೆ ಸದಸ್ಯರುಗಳೂ ಕೂಡ ಇದೇ ವಿಷಯದಲ್ಲಿ ಚರ್ಚೆ ಮಾಡಬೇಕೆಂದು ಕೇಳಿದರೆ, ಅವರುಗಳು ಚರ್ಚೆ ಮಾಡಬೇಕಾದರೆ ಮೊದಲೇ ನೋಟೀಸ್ ಕಳುಹಿಸಕೂಡಬೇಕಾಗುತ್ತದೆ. ಆದರೆ ಅವರು ನೋಟಿಸ್‌ನ್ನು ಕೊಡುವುದಿಲ್ಲ ಮನೋಹರ್‌ರವರು ಹೇಳುವುದು ನಮಗೂ ತಿಳಿಯುವುದಿಲ್ಲ ಆದರೂ ಉಚ್ಚಗಾಂವ್ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಮಂತ್ರಿಗಳು ಉತ್ತರವನ್ನು ಈಗಾಗಲೇ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಕನ್‌ವರ್ಟ್ ಮಾಡಬೇಕೆಂದಾದರೆ ಆ ರೀತಿಯಲ್ಲಿ ಕನ್‌ವರ್ಟ್ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಅದನ್ನು ಯಾವಾಗ ಮಾಡಬೇಕೆಂಬುದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಅಧ್ಯಕ್ಷರು: ಈ ಅಧಿವೇಶನದಲ್ಲಿಯೇ ತೆಗೆದುಕೊಳ್ಳೋಣ. ಒಟ್ಟಾರೆಯಾಗಿ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ಮಂತ್ರಿಗಳು ಉತ್ತರ ಹೇಳಲು ಬೇಕಾದ ವಿವರಗಳನ್ನು ಪಡೆಯಲು ಸ್ವಲ್ಪ ಕಾಲಾವಕಾಶ ಬೇಕಲ್ಲವೇ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನನಗೆ ತಿಳಿದಿರುವ ಹಾಗೆ ಗಮನ

ಸೆಳೆಯುವ ಸೂಚನೆಯನ್ನು ಅರ್ಧ ಗಂಟೆ ಅವಧಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಯಾವ್ಯಾದಾದರೂ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿ ಅದರ ಬಗ್ಗೆ ಅರ್ಧ ಗಂಟೆ ಅವಧಿ ಚರ್ಚೆಗೆ ತಾವು ಅವಕಾಶ ಮಾಡಿಕೊಡಬಹುದು. ಗಮನ ಸೆಳೆಯುವ ಸೂಚನೆಯನ್ನೇ ಬೇಕಾದರೆ ನಾಳೆ ತೆಗೆದುಕೊಂಡು ಅದೇ ವಿಷಯದ ಬಗ್ಗೆ ಆ ಭಾಗದ ಇನ್ನೂ ಹಲವಾರು ಸದಸ್ಯರು ಮಾತನಾಡಲು ಅಧ್ಯಕ್ಷರಾದ ತಾವು ಅವಕಾಶ ಮಾಡಿಕೊಡಬಹುದು.

ಅಧ್ಯಕ್ಷರು: ಅವಕಾಶ ಮಾಡಿಕೊಡೋಣ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಹಣ ಬಿಡುಗಡೆ ಮಾಡಿಸಿಬಿಟ್ಟರೆ ಚರ್ಚೆಯೇ ಬೇಡ. ಮಳೆಗಾಲ ಪ್ರಾರಂಭವಾಗುತ್ತಿದೆ, ಅಲ್ಲಿ ಸೇತುವೆಗಳನ್ನು ಮಾಡುತ್ತಿದ್ದಾರೆ, ಆದರೆ ಆ ಕೆಲಸಗಳು ಅರ್ಧಕ್ಕೇ ನಿಂತುಹೋಗಿದೆ. ಕಳೆದ ಎರಡು ವರ್ಷಗಳಿಂದ ಹಣವೇ ಬಿಡುಗಡೆಯಾಗುತ್ತಿಲ್ಲವೆಂದರೆ ಏನರ್ಥ?

ಶ್ರೀ ರಮಾನಾಥ ರೈ (ಮೀನುಗಾರಿಕೆ ಬಂದರು ಒಳನಾಡು ಮತ್ತು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ 18.75 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದಕ್ಕೂ ಹಿಂದೆ 15.70 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಬಾರಿ 24.63 ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲಿ ಆನ್-ಗೋಯಿಂಗ್ ವರ್ಕ್ಸ್ ಬಹಳಷ್ಟು ಇದೆ. ಸ್ಪಿಟಲ್ ಓವರ್ ವರ್ಕ್ ಬಹಳಷ್ಟು ಇದೆ. ನನ್ನ ಅಪೇಕ್ಷೆ ಏನೇಂದರೆ ಯಾವ ಯಾವ ಆನ್-ಗೋಯಿಂಗ್ ವರ್ಕ್‌ಗಳು ಅಲ್ಲಿ ನಡೆಯುತ್ತಿವೆ ಅದನ್ನು ಪೂರ್ಣ ಮಾಡಿ ತದನಂತರ ಹೊಸ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂಬುದೇ ಆಗಿದೆ. ಇದರ ಬಗ್ಗೆ ಚರ್ಚೆ ಮಾಡಿದರೆ ನನಗೂ ಉತ್ತರ ಕೊಡಲು ಮಾಹಿತಿಗಳನ್ನು ತರಿಸಲು ಕಾಲಾವಕಾಶ ಬೇಕು.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಂತ್ರಿಗಳಿಗೂ ಕೂಡ ಈ ವಿಷಯದ ಮೇಲೆ ಚರ್ಚೆಯಾಗಬೇಕೆಂಮ ಇಚ್ಛೆ ಇದೆ. ಏಕೆಂದರೆ ಮಲೆನಾಡು ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ ಹಣವನ್ನು ಪಡೆಯಲು ಎಲ್ಲಾ ಸದಸ್ಯರ ಒತ್ತಡವೂ ಬೇಕೆಂದು ಅವರ ಮನಸ್ಸಿನ ಭಾವನೆಯಿದೆ.

ಅಧ್ಯಕ್ಷರು: ಸದಾನಂದಗೌಡರೆ, ಇನ್ನೊಂದು ದಿವಸ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಮನೋಹರ್ ಕಡೋಲ್ಕರ್: ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಕೇವಲ 16 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಪ್ರತಿ ವರ್ಷ ಮಲೆನಾಡು ಅಭಿವೃದ್ಧಿಗಾಗಿ 45 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು.

ಅಧ್ಯಕ್ಷರು: ಮನೋಹರ್‌ರವರೆ, ಸದರಿ ವಿಷಯವನ್ನು ಅರ್ಧಗಂಟೆ ಕಾಲಾವಧಿ ಚರ್ಚೆಯಲ್ಲಿ ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ. ಯಾವತ್ತು ಇದನ್ನು ತೆಗೆದುಕೊಳ್ಳುತ್ತೇವೊ ಅಂದೇ ನೀವು ಇದರ ಮೇಲೆ ಮಾತನಾಡಲು ಅವಕಾಶ ಕೊಡುತ್ತೇನೆ. ಈಗ ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನ ಒಂದು ವಿನಂತಿಯೇನೆಂದರೆ, ಸದರಿ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ತೆಗೆದುಕೊಂಡಾಗ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ವಿಚಾರವನ್ನು ಕೂಡ ಅದರಲ್ಲಿಯೇ ಸೇರಿಸಿಬಿಟ್ಟರೆ ಬಹಳ ಒಳ್ಳೆಯ ಉಪಕಾರವಾದಂತಾಗುತ್ತದೆ.

ಅಧ್ಯಕ್ಷರು: ಆಯಿತು. ಸೇರಿಸೋಣ ಬಿಡಿ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಈ ಮಲೆನಾಡು ಅಭಿವೃದ್ಧಿ ಮಂಡಳಿ ವಿಚಾರದ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಸೇರಿಸುವ ಬದಲು ಮಲೆನಾಡು ಅಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಸಕರ ಸಭೆಯನ್ನು ಮಂತ್ರಿಗಳು ಕರೆದು ಅಲ್ಲಿ ಚರ್ಚಿಸಿದರೆ ಎಲ್ಲಾ ಕ್ಷೇತ್ರಗಳ ಸಮಸ್ಯೆಗಳೂ ಬಗೆಹರಿಯಲು ಅನುಕೂಲವಾಗುತ್ತದೆ.

ಶ್ರೀ ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ವಿಧಾನಸಭೆ ಅಧಿವೇಶನ 5ನೇ ಮೇ 2000ರವರೆಗೂ ಇದೆ. ಇದು ಮುಗಿದ ಮೇಲೆ ತಕ್ಷಣ ಒಂದು ಸಭೆಯನ್ನು ಕರೆಯಲು ಪರಿಶೀಲಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇವಲ ಆ ಸಭೆಯಲ್ಲಿ ಶಾಸಕರುಗಳು ಬಂದರೆ ಸಮಸ್ಯೆ ಬಗೆಹರಿಯುವುದಿಲ್ಲ ಆ ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಬರಲೇಬೇಕು. ಏಕೆಂದರೆ ಹಣ ಬಿಡುಗಡೆಯಾಗಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಇರಲೇಬೇಕು. ಕೇವಲ ಮಾನ್ಯ ಮಂತ್ರಿಯವರು ಇದ್ದರೆ ಶಾಸಕರಾದ ನಾವುಗಳು ಏನೇ ಹೇಳಿದರೂ ಕೂಡ ಹಣವಿಲ್ಲ ಹಣವಿಲ್ಲವೆನ್ನುತ್ತಾರೆ. ಆದುದರಿಂದ ಹಣಕಾಸಿನ ಖಾತೆಯನ್ನು ಹೊಂದಿರುವ ಮಾನ್ಯ ಮುಖ್ಯಮಂತ್ರಿಗಳು ಆ ಸಭೆಗೆ ಬರುತ್ತಾರೆಯೇ? ಮುಖ್ಯಮಂತ್ರಿಗಳು ಬರದಿದ್ದರೆ ಅಂಥ ಸಭೆಯನ್ನು ಮಂತ್ರಿಗಳು ಕರೆಯಬಾರದು. ಚಹಾ ದುಡ್ಡು ಕೂಡ ದಂಡವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಬರದಿದ್ದರೆ ಸಭೆಯನ್ನು ಕರೆದು ಏನು ಉಪಯೋಗವಾಗುತ್ತದೆ? ನೀವು ಕರೆಯುವ ಸಭೆಗೆ ಮುಖ್ಯಮಂತ್ರಿಗಳು ಬರುತ್ತಾರೆಂದರೆ ಮಾತ್ರ ಶಾಸಕರ ಸಭೆಯನ್ನು ಕರೆಯಿರಿ. ಅವರು ಬರದೇ ಇದ್ದರೆ ಸದರಿ ವಿಷಯವನ್ನು ಸದನದಲ್ಲಿಯೇ ಚರ್ಚೆ ಮಾಡೋಣ.

ಶ್ರೀ ರಮಾನಾಥ್ ರೈ: ಈ ಬಾರಿ 24 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದರಲ್ಲಿ 20 ಕೋಟಿ ರೂಪಾಯಿಗಳು ನಬಾರ್ಡ್‌ದ್ದಾಗಿದೆ, ಕೇವಲ 4 ಕೋಟಿ ರೂಪಾಯಿಗಳು ನಿಮ್ಮ ಸರ್ಕಾರದ್ದಾಗಿದೆ. ನಿಮ್ಮ ಬಜೆಟ್‌ನಲ್ಲಿ ಎಷ್ಟು ಕೊಟ್ಟಿದ್ದೀರಿ ಹೇಳಿ.

ಅಧ್ಯಕ್ಷರು: ಮಾನ್ಯ ಕಾನೂನು ಮತು ಸಂಸದೀಯ ವ್ಯವಹಾರಗಳ ಸಚಿವರೆ, ರಾಜ್ಯಪಾಲರ ಭಾಷಣದ ಬಗ್ಗೆ ಈಗ ಚರ್ಚೆಗೆ ತೆಗೆದುಕೊಳ್ಳಬೇಕು. ಇಂದು ಬೆಳಿಗ್ಗೆ ನಾನು ವಿರೋಧ ಪಕ್ಷದ ನಾಯಕರ ಜೊತೆ ಇದರ ಬಗ್ಗೆ ಮಾತನಾಡಿದೆ. ಒಂದೊಂದು ಪಕ್ಷದಿಂದ ನಾಲ್ಕು ಜನರೆಂದರೂ ಸಹ ಕನಿಷ್ಟ ಪಕ್ಷ ಹನ್ನೆರಡು ಜನ ಸದಸ್ಯರು ಮಾತನಾಡಬೇಕಾಗಿದೆ. ಆದ್ದರಿಂದ ಇಂದಿನ ಸಮಯ ಸಾಕಾಗುವುದಿಲ್ಲವೆಂದು ಒಂದು ಕಡೆ ಹೇಳುತ್ತಾರೆ. ಮತ್ತೊಂದು ಕಡೆ ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಇಂದು ಮೂರು ಗಂಟೆಗೆ ಎಂದು ನಿಗದಿ ಮಾಡಿದ್ದೇವೆ. ಮುಖ್ಯಮಂತ್ರಿಗಳ ಜೊತೆ ಇಂದು ಬೆಳಿಗ್ಗೆ ಮಾತನಾಡಿದಾಗ ಸಭೆಯಲ್ಲಿ ಯಾವ ರೀತಿ ವಿಷಯಗಳು ಬರುತ್ತದೆ ನೋಡಿ, ಆ ಪ್ರಕಾರ ಮಾಡೋಣ ಎಂದು ಅವರು ಒಪ್ಪಿಕೊಂಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇಂದು ಮಧ್ಯಾಯಹ್ನ 2-30 ರಿಂದ 6-30ರವರೆಗೆ ಅಂದರೆ ನಾಲ್ಕು ಗಂಟೆಗಳ ಕಾಲ ಸದಸ್ಯರುಗಳು ಮಾತನಾಡಿ ಬಿಡಲಿ. ನಾಳೆ ಬೆಳಿಗ್ಗೆ 11ಗಂಟೆಗೆ ನೇರವಾಗಿ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ. ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತೀರಿ?

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಆ ರೀತಿ ಮಾಡುವುದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ ನನ್ನ ಮನವಿ ಏನೆಂದರೆ ಇದು ಮೂರನೆ ಬಾರಿ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಪೋಸ್ಟ್‌ಪೋನ್ ಆಗುತ್ತಿರುವುದು. ಮತ್ತೆ ನಾಳೆಯೂ ಸಹ ಅದೇ ರೀತಿ ಆಗದಿರುವ ಹಾಗೆ ಮಾಡುವುದಾದರೆ ನನ್ನ ಅಭ್ಯಂತರವೇನಿಲ್ಲ.

ಅಧ್ಯಕ್ಷರು: ನಾಳೆ ಸದಸ್ಯರುಗಳಿಗೆ ಮಾತನಾಡಲು ಅವಕಾಶವನ್ನೇ ಕೊಡುವುದಿಲ್ಲ. ಸದಸ್ಯರುಗಳು ಇಂದು ಮಾತನಾಡಿಕೊಳ್ಳಲಿ. ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ನೀಡಲಿ.

ಶ್ರೀ ಡಿ.ಬಿ.ಚಂದ್ರೇಗೌಡ: ಅವರು ಒಂದು ರೈಡರ್ ಬೇರೆ ಹಾಕುತ್ತಾರೆ. ಇನ್ನೇನು ಅನಾಹುತಗಳು ಆಗದಿದ್ದರೆ, ನಾಳೆ ದಿನ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅನಾಹುತಗಳು ಆಗತಕ್ಕದ್ದನ್ನು ನಾವು ಇಲ್ಲಿ ಪ್ರಿಡಿಕ್ಟ್ ಮಾಡುವುದು ಸರಿಯಲ್ಲ. ಬಿ.ಎ.ಸಿ.ಯಲ್ಲಿ ಏನೇನು ಚರ್ಚೆಯಾಗುತ್ತದೆ ಅದನ್ನು ಇಲ್ಲಿ ಹೇಳುವುದಕ್ಕೆ ಆಗುತ್ತದೆಯ? ಅನಾಹುತವಿದ್ದರೆ ಅದು ಮುಖ್ಯಮಂತ್ರಿಗಳ ಉತ್ತರದಿಂದ ಎಂದು ಹೇಳಿ. ದೇಶದ, ರಾಜ್ಯದ ಬಗ್ಗೆ ಕಾಳಜಿ ಇದ್ದರೆ ಉತ್ತರವನ್ನು

ಕೊಡಿ.

ಅಧ್ಯಕ್ಷರು: ಇಲ್ಲಿಗೆ ಸಭೆಯನ್ನು ಮುಂದೂಡಿ ಮತ್ತೆ 2-40ಕ್ಕೆ ಸಮಾವೇಶಗೊಳ್ಳೋಣ.

(ಸದನವು 1-45 ಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 2-40ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3 ಗಂಟೆ ಪುನರ್ ಸಮಾವೇಶಗೊಂಡಿತು (ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)